ಸಹಕಾರೀ ಖಾತೆಯ ಅಮಲದಾರರಿಗೆ ಸೂಚನೆಗಳು.

ಸಹಕಾರೀ ಚಳವಳಿಯ ಉದ್ದೇಶವು, ಸ್ವಾವಲಂಬನವನ್ನು ಬೆಳಿಸುವದೂ, ಒಕ್ಕಲಿಗರಲ್ಲಿಯೂ ಅಲ್ಪ ಹಣವಿರುವ ಮನುಷ್ಯರಲ್ಲಿಯೂ ಸಂಘಟನೆಯನ್ನುಂಟು ಮಾಡಿ ಸ್ವಾವಲಂಬನವನ್ನು ಪರಿಣಾಮಕಾರಕವಾಗಿ ಮಾಡುವದೂ ಇರುತ್ತದೆ.

೨. ಶಹರ ಪ್ರದೇಶಗಳು, ಮುಖ್ಯವಾಗಿ ಸಂಯುಕ್ತ ಭಂಡವಲದ ಪದ್ಧತಿಯ ಆಧಾರದ ಮೇಲೆ ಸಂಘಟನೆಯನ್ನು ಮಾಡಿಕೊಂಡು ಗ್ರಾಮ ಪ್ರದೇಶಗಳನ್ನು ಮೂಲೆ ಗೊತ್ತಿ ಸಂಪನ್ನವಾಗಿವೆ. ಒಕ್ಕಲಿಗರು ತಮ್ಮ ಲಾಭಗಳು, ಲುಕ್ಸಾನುಗಳು ಮತ್ತು ನಿರ್ಬಂಧವು ನ್ಯಾಯ್ಯವಾಗಿ ಹಂಚಿಬೀಳುವಂತೆ ಇದೇ ಮೇರೆಗೆ ಸಂಘಟನೆಯನ್ನು ಮಾಡಿಕೊಳ್ಳಬೇಕು. ಈ ಬಗ್ಗೆ ಅತಿ ಮಹತ್ವದ ಸಂಗತಿಯೆಂದರೆ, ಒಕ್ಕಲಿಗರು ಸದ್ಯದಲ್ಲಿ ಒಟ್ಟುಗೂಡಿ ಕೆಲಸ ಮಾಡುವ ಬಗ್ಗೆ ತೋರಿಸುವ ಪ್ರವೃತ್ತಿಯೇ ಇರುತ್ತದೆ. ಗ್ರಾಮ ಪ್ರದೇಶಗಳಲ್ಲಿ ಸಂಯುಕ್ತ ಭಂಡವಲದ ಪದ್ಧತಿಯ ಸಂಘಟನೆಯು ಅಯೋಗ್ಯವಿರುತ್ತದೆ, ಯಾಕೆಂದರೆ ಇಂಥ ಸಂಸ್ಥೆಯು ಕೆಲಕಾಲದಲ್ಲಿ ನಿರ್ದಯವಾದ ಸಂಸ್ಥೆಯಾಗುತ್ತದೆ, ಆದರೆ ಸಹಕಾರೀ ಸಂಘದಿಂದ ಉಚ್ಚ ನೈತಿಕ ಗುಣಗಳು ಬೆಳೆದು ಅನೇಕ ಆರ್ಥಿಕ ವಿಚಾರಗಳ ಪ್ರಚಾರವಾಗುತ್ತದೆ. ಸಹಕಾರೀ ಸಂಘಗಳ ಸಹಾಯದಿಂದ ಸಭಾಸದರಲ್ಲಿ ಒಳ್ಳೀ ನಡತೆಯು ಬೆಳೆಯುತ್ತದೆ ಮತ್ತು ಮುಂದಾಳುಗಳು ಹುಟ್ಟುತ್ತಾರೆ, ಮತ್ತು ಇವರು ಗ್ರಾಮದ ಕಲ್ಯಾಣವನ್ನುಂಟುಮಾಡುವಲ್ಲಿಯೂ, ಸಂಯುಕ್ತ ಸಾಮಾಜಿಕ ಕಾರ್ಯವನ್ನು ಕೈಕೊಳ್ಳಲಿಕ್ಕೆ ಸಭಾಸದರಿಗೆ ಶಿಕ್ಷಣ ಕೊಡುವಲ್ಲಿಯೂ ಸಹಾಯ ಮಾಡುವರು.

೩. ಒಕ್ಕಲತನದ ಸಾಧನಗಳನ್ನು ಕೊಂಡುಕೊಳ್ಳುವಲ್ಲಿಯೂ, ಒಕ್ಕಲತನದ ಉತ್ಪನ್ನವನ್ನು ಮಾರುವಲ್ಲಿಯೂ, ಅವಶ್ಯವಿರುವ ಪತ್ತನ್ನು ಒದಗಿಸಿಕೊಡುವಲ್ಲಿಯೂ ಆಗುತ್ತಿರುವ ಪರಸ್ವಾಪಹಾರಕ್ಕೆ ತಡೆಹಾಕಿ ಒಕ್ಕಲತನದ ಉದ್ಯೋಗವನ್ನು ಸುಧಾರಿಸುವ ಒಂದೇ ಒಂದು ಉಪಾಯವು ಸಹಕಾರವಾಗಿದೆ. ಹೆಚ್ಚೆಚ್ಚು ವ್ಯಾಪಾರವಾದರೆ, ಹೆಚ್ಚು ಒಳ್ಳೀ ಸಾಗುವಳಿಯೂ ಹೆಚ್ಚು ಒಳ್ಳೀ ಜೀವನವೂ ಉಂಟಾಗುತ್ತವೆ, ಯಾಕೆಂದರೆ, ಒಕ್ಕಲಿಗನಿಗೆ ತನ್ನ ಶ್ರಮದಿಂದ ಫಲವು ಹೆಚ್ಚೆಚ್ಚಾಗಿ ದೊರೆತ ಪಕ್ಷಕ್ಕೆ ಅವನ ಸಾಮಾಜಿಕ ಜೀವನವು ಸುಧಾರಿಸುವದು, ಮತ್ತು ಅವನು ಶಾಸ್ತ್ರೀಯ ತತ್ವಗಳನ್ನು ವ್ಯವಹಾರದಲ್ಲಿ ಉಪಯೋಗಿಸುವದರಿಂದ ಸಾಗುವಳಿಯ ಯಾಂತ್ರಿಕ ಭಾಗದ ಸುಧಾರಣೆಗಾಗಿ ಅವನಿಗೆ ಕೊಡಲ್ಪಟ್ಟ ಸೂಚನೆಗಳ ಉಪಯೋಗವನ್ನು ಅವನು ಹೆಚ್ಚೆಚ್ಚಾಗಿ ಮಾಡಿಕೊಳ್ಳಲಿಕ್ಕೆ ಸಮರ್ಥನಾಗುವನು. ಈ ಉದ್ದೇಶವು ನೆರವೇರ ಬೇಕಾದರೆ, ಸತತವಾದ ಪ್ರಚಾರಕಾರ್ಯವೂ ಶಿಕ್ಷಣವೂ ಅವಶ್ಯವಿರುತ್ತವೆ. ಪರಿಣಾಮಗಳು ಕಂಡುಬರಲಿಕ್ಕೆ ತಡವಾದರೆ, ನೀವು ನಿರಾಶರಾಗದೆ ದೃಢವಾಗಿ ಪ್ರಯತ್ನ ಮಾಡುತ್ತಿರಬೇಕು, ಮತ್ತು ನಿಮ್ಮ ಕರ್ತವ್ಯವು ಜನರ ಕೆಲಸವನ್ನು ನೀವೇ ಮಾಡುವದಿರದೆ, ಅವರ ಸುಧಾರಣೆಯು ಮತ್ತು ಉದ್ಧಾರವು ಸ್ವಾವಲಂಬನದ ಮತ್ತು ಸಂಘಟಿತ ಪರಸ್ಪರ ಸಹಾಯದ ಮೇಲೆ ಅವಲಂಬಿಸಿರುವವೆಂದು ಅವರಿಗೆ ತಿಳಿಸಿ ಹೇಳುವದಾಗಿದೆ. ಜನರೊಡನೆ ಅನಿರ್ಬಂಧವಾಗಿ ಕೂಡಿ ನಡೆಯಿರಿ ಮತ್ತು ಅವರ ವಿಚಾರಗಳನ್ನು ಮತ್ತು ಅಡಚಣಿಗಳನ್ನು ತಿಳುಕೊಳ್ಳಲಿಕ್ಕೆ ಪ್ರಯತ್ನ ಮಾಡಿರಿ.

೪. ಈ ವರೆಗೆ ಈ ಖಾತೆಯ ಅಮಲದಾರರ ಕೆಲಸವು ಮುಖ್ಯವಾಗಿ ಪತ್ತಿನ ಕಾರ್ಯಗಳನ್ನು ಬೆಳಿಸುವಲ್ಲಿಯೇ ಉಪಯೋಗಿಸಲ್ಪಡುತ್ತಿದೆ, ಆದರೆ ಇದು ಸಹಕಾರದ

ಅಂಗಗಳಲ್ಲಿ ಒಂದು ಅಂಗವಾಗಿರುತ್ತದೆ, ಮತ್ತು ಇದು ಅತ್ಯವಶ್ಯವೂ ಕೈಕೊಳ್ಳಲಿಕ್ಕೆ ಅತಿ ಸುಲಭವೂ ಇದ್ದದರಿಂದ, ಇದನ್ನೇ ಎಲ್ಲಕ್ಕೂ ಮುಂಚೆ ಸಂವರ್ಧಿಸಲಾಗಿದೆ.

೫. ಒಳ್ಳೇ ಸಹಕಾರೀ ಸಂಘವನ್ನು ಸಂಘಟಿಸುವದರಿಂದ ಬಡ್ಡಿಯು ದರಗಳಲ್ಲಿ ಉಳಿತಾಯ ಮಾಡಬಹುದಾಗಿದ್ದರೂ, ಇಂಥ ಉಳಿತಾಯವನ್ನು ಹ್ಯಾಗೆ ಉಪಯೋಗಿಸಿಕೊಳ್ಳಬೇಕೆಂಬದನ್ನು ನಾವು ಸಭಾಸದರಿಗೆ ಕಲಿಸದಿದ್ದರೆ, ಸಹಕಾರೀ ಚಳವಳಿಯ ಉದ್ದೇಶವು ಅಪೂರ್ಣ ಉಳಿದಂತಾಗುವದು. ಇದಲ್ಲದೆ, ಅಗ್ಗವಾಗಿ ಸಾಲ ದೊರೆಯುವಂತೆ ಮಾಡಿದರೆ ಸಾಲದು. ಸಭಾಸದನಿಗೆ, ತನ್ನ ಉತ್ಪನ್ನವನ್ನು ಅತಿ ಲಾಭದಾಯಕ ದರದಿಂದ ಮಾರಲಿಕ್ಕೂ, ಒಕ್ಕಲತನದ ಸಾಧನಗಳನ್ನು ಅತಿ ಕಡಿಮೆ ದರದಿಂದ ಪಡೆಯಲಿಕ್ಕೂ, ಮತ್ತು ಈ ರೀತಿಯಿಂದ ಒಂದೇ ಕಾಲದಲ್ಲಿ ತನ್ನ ಉತ್ಪನ್ನಕ್ಕೆ ಹೆಚ್ಚು ನಗದಿ ಹಣವನ್ನು ಪಡೆದು ತನ್ನ ಉತ್ಪನ್ನದ ಖರ್ಚನ್ನು ಕಡಿಮೆ ಮಾಡಿ ತನ್ನ ಉತ್ಪನ್ನವನ್ನು ಬೆಳಿಸಿಕೊಳ್ಳಲಿಕ್ಕೂ ನಾವು ಕಲಿಸತಕ್ಕದ್ದು. ಸಹಕಾರೀ ಮಾರಾಟದ ಸಂಘಗಳ ಮತ್ತು ಮಾಲನ್ನು ಪೂರೈಸುವ ಮತ್ತು ಮಾರುವ ಸಂಘಗಳ ಉಪಯೋಗವನ್ನು ಯೋಗ್ಯವಾಗಿ ಮಾಡಿದರೆ, ಅವುಗಳು ಈ ಉದ್ದೇಶಗಳನ್ನು ನೆರವೇರಿಸುವವು. ಇದಲ್ಲದೆ, ಒಕ್ಕಲಿಗನಿಗೆ ತನ್ನ ಖಾಲೀ ವೇಳೆಯಲ್ಲಿ ಸಹಾಯಕ ಕೈಗಾರಿಕೆಗಳನ್ನು ಒದಗಿಸಿಕೊಡುವದರಿಂದ ಅವನ ಉತ್ಪನ್ನವು ಬೆಳೆಯುವದು. ಅವನ ದನ ಕರುಗಳ ಪೀಳಿಗೆಯನ್ನು ಸುಧಾರಿಸುವ ಕೆಲಸವನ್ನು ದನಗಳನ್ನು ಬೆಳಿಸುವ ಸಂಘಗಳು ಕೈಕೊಳ್ಳಬಹುದು, ಮತ್ತು ಒಕ್ಕಲಿಗರ ಉತ್ಪನ್ನವನ್ನು ಹೆಚ್ಚಿಸುವ ಬಗ್ಗೆ ಸಹಕಾರೀ ಹಾಲಿನ ಕಾರಖಾನೆಗಳನ್ನು ಪ್ರಾರಂಭಿಸಬಹುದು. ಸಹಕಾರೀ ತತ್ವಗಳ ಮೇರೆಗೆ ಬೇಲಿ ಹಾಕಿದರೆ, ಕಡಿಮೆ ಖರ್ಚಿನಿಂದ ಕಾಡುಮೃಗಗಳ ಹಾವಳಿಯಿಂದ ಬೆಳೆಗಳ ರಕ್ಷಣೆಯಾಗುವದು, ಮತ್ತು ಸಹಕಾರೀ ರೀತಿಯಿಂದ ಕೆಲಸ ಮಾಡಿದರೆ, ಒಕ್ಕಲ ತನದ ಖರ್ಚನ್ನು ಕಡಿಮೆ ಮಾಡುವ ಅನೇಕ ಸುಧಾರಣೆಗಳನ್ನು ಕೈಕೊಳ್ಳಬಹುದು. ಸಾಮಾನ್ಯ ಸಹಕಾರೀ ಪತ್ತಿನ ಸಂಘಗಳು, ಒಕ್ಕಲಿಗರ ಉತ್ಪನ್ನವನ್ನು ಬೆಳಿಸುವ ಅಥವಾ ಆ ಬಗ್ಗೆ ಅವರಿಗೆ ತಗಲುವ ಖರ್ಚನ್ನು ಕಡಿಮೆ ಮಾಡುವ ಕೆಲಸವನ್ನು ವಾಜವಿಯಾಗಿ ಮಾಡಲಿಕ್ಕೆ ಸಮರ್ಥವಿರುವದರಿಂದ, ಈ ಬಗ್ಗೆ ಕೆಲಸ ಮಾಡುವಂತೆ ಅವುಗಳ ಮನ ವೊಲಿಸತಕ್ಕದ್ದು. ಆದರೆ, ಸಹಕಾರೀ ರೀತಿಯಿಂದ ದೊಡ್ಡ ಪ್ರಮಾಣದ ಕೆಲಸವನ್ನು ಕೈಕೊಳ್ಳುವದು ಅವಶ್ಯತೋರಿದರೆ, ಈ ವಿಶಿಷ್ಟ ಉದ್ದೇಶಕ್ಕಾಗಿ ಒಂದು ಬೇರೆ ಸಂಘವನ್ನು ನೋಂದಿಸತಕ್ಕದ್ದು, ಮತ್ತು ಹೀಗೆ ಮಾಡಿದರೆ ಆ ಸಂಘವು ಈ ಉದ್ದೇಶದ ಬಗ್ಗೆ ತನ್ನ ಕೈಲಾದ ಯತ್ನಗಳನ್ನು ಮಾಡಲಿಕ್ಕೆ ಸಮರ್ಥವಾಗುವದು.

೬. ಸಹಕಾರೀ ಪತ್ತಿನ ಸಂಘದ ಉದ್ದೇಶವು, ಮುಖ್ಯವಾಗಿ, ಉತ್ಪಾದಕ ಉದ್ದೇಶಗಳಿಗಾಗಿ ವಾಜವಿ ಬಡ್ಡಿಯ ದರದಿಂದ ನಿರ್ಬಂಧಿತ ಪತ್ತನ್ನು ಒದಗಿಸಿ ಕೊಡುವದಿರುತ್ತದೆ. ಯೋಗ್ಯವಾಗಿ ನಡಿಸಲ್ಪಟ್ಟ ಸಹಕಾರೀ ಸಂಘವು ಅದರ ಸಭಾಸದರಿಗೆ ನಿಜವಾದ ಸಹಾಯವನ್ನು ಕೊಡುವದು. ಅದರ ಯಶಸ್ಸನ್ನು, ಕೇವಲ ಅದರ ಆಯ ವ್ಯಯ ಪತ್ರಿಕೆಯ ಮೇಲಿಂದಲ್ಲದೆ, ಅದರ ಸಭಾಸದರು ಎಷ್ಟರಮಟ್ಟಿಗೆ ಸಹಕಾರದ ತತ್ವಗಳನ್ನು ತಿಳುಕೊಂಡು ವ್ಯವಹಾರದಲ್ಲಿ ಉಪಯೋಗಿಸುತ್ತಾರೆಂಬದರ ಮೇಲಿಂದಲೂ ಕಂಡುಹಿಡಿಯಬೇಕು. ಈ ಸಂಬಂಧದಿಂದ ಲೆಖ್ಖ ಪರಿಶೋಧಕರು ಸದರಿ ಸಂಘದ ಲೆಖ್ಖದ ಪರಿಶೋಧನೆಯನ್ನು ಮಾಡುವದಲ್ಲದೆ, ಸಭಾಸದರಿಗೆ ಅನಿರ್ಬಂಧವಾಗಿ ಭೆಟ್ಟಿಯಾಗಿ, ಅವರಿಗಿರುವ ಅಡಚಣಿಗಳ ಬಗ್ಗೆ ಅವರೊಡನೆ ಚರ್ಚೆಮಾಡಿ, ಮುಂದೆ ಪ್ರಗತಿಯಾಗಬೇಕಾದರೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬದನ್ನು

ಅವರಿಗೆ ತಿಳಿಸಿ ಹೇಳಬೇಕು. ಸಂಘದ ಸಭಾಸದರಿಗೆ, ಪತ್ತನ್ನು ಉತ್ಪಾದಕ ಉದ್ದೇಶ ಗಳಿಗಾಗಿಯೇ ಉಪಯೋಗಿಸಲಿಕ್ಕೂ, ತಾವು ಸಂಘಗಳಿಗೆ ಕೊಡಬೇಕಾದ ಸಾಲ ಗಳನ್ನು ತಮ್ಮ ಕೈಲಾದಮಟ್ಟಿಗೆ ಹಿಂತಿರುಗಿ ಕೊಡಲಿಕ್ಕೂ ಕಲಿಸಬೇಕು. ಇಂಥ ಸಂಘಗಳು ಗ್ರಾಮಸುಧಾರಣೆಯ ಕೆಲಸವನ್ನು ಕೈಕೊಳ್ಳುವ ಯಾವ ಸಂಧಿಯನ್ನೂ ಕಳಕೊಳ್ಳಬಾರದು, ಮತ್ತು ಪ್ರತಿವರ್ಷ ಧರ್ಮಾದಾಯದ ಹಾಗೂ ಇತರ ಕಾರಣ ಗಳ ಬಗ್ಗೆ ಲಾಭಗಳೊಳಗಿಂದ ತೆಗೆದಿಟ್ಟ ಹಣವನ್ನು ಇಂಥ ಕೆಲಸಕ್ಕಾಗಿ ಉಪ ಯೋಗಿಸಬೇಕು. ಅನೇಕ ಸಂಘಗಳು ರಾತ್ರಿಯ ಶಾಲೆಗಳನ್ನು ನಡಿಸುತ್ತವೆ, ಅವುಗಳಿಗೆ ತಮ್ಮ ಸ್ವಂತ ಇಮಾರತುಗಳಿರುತ್ತವೆ, ಅವುಗಳು ಗ್ರಾಮದ ಪುಸ್ತಕಾಲಯ ಗಳನ್ನು ನಡಿಸುತ್ತವೆ, ಬೀಜದ ಹೋರಿಗಳನ್ನು ಸಾಕುತ್ತವೆ, ಸುಧಾರಿಸಿದ ಸಾಧನ ಗಳನ್ನು ಬಾಡಿಗೆಗೆ ತಕ್ಕೊಳ್ಳುತ್ತವೆ ಮತ್ತು ಕ್ವಿನಾಯಿನು ಮುಂತಾದ ಔಷಧಗಳನ್ನು ಪುಕ್ಕಟೆಯಾಗಿ ಹಂಚುತ್ತವೆ. ಇಂಥ ಚಟುವಟಿಕೆಗಳನ್ನು ಖಾತೆಯ ಯಾವತ್ತು ಅಮಲದಾರರು ಪ್ರೋತ್ಸಾಹಿಸಬೇಕು.

೭. ಆದರೆ, ಸುಸಂಘಟಿತವಾಗಿ ಗ್ರಾಮಸುಧಾರಣೆ ಮಾಡುವ ಬಗ್ಗೆ ಯಾವ ದೊಂದು ಗ್ರಾಮವು ಅಂತಃಕರಣಪೂರ್ವಕವಾಗಿ ಇಚ್ಛಿಸಿದರೆ, ಹೆಚ್ಚು ಸುಖಮಯ ಜೀವನಕ್ಕವಕಾಶಕೊಡುವ ಸಂಘಗಳ ತತ್ವಗಳನ್ನು ಸಭಾಸದರಿಗೆ ವಿವರಿಸಿ ಹೇಳ ಬೇಕು. ಇಂಥ ಸಂಘಗಳ ಉದ್ದೇಶಗಳು ವ್ಯಾಪಕ ಸ್ವರೂಪದವಿದ್ದು, ಅವುಗಳಲ್ಲಿ ಆರ್ಥಿಕ, ಭೌತಿಕ ಮತ್ತು ನೈತಿಕ ಸುಧಾರಣೆಗಳು ಸೇರುತ್ತವೆ. ಹೆಚ್ಚು ಒಳ್ಳೇ ಶಿಕ್ಷಣ, ಹೆಚ್ಚು ಒಳ್ಳೇ ವ್ಯಾಪಾರ, ಹೆಚ್ಚು ಸ್ವಚ್ಛವಾದ ಜೀವನ, ಮಿತವ್ಯಯ, ಸ್ವಾವಲಂಬನ ಮತ್ತು ಹೆಚ್ಚು ಒಳ್ಳೇ ಸಾಗುವಳಿ, ಇವೆಲ್ಲವುಗಳು ಇಂಥ ಸಂಘಗಳ ಕೆಲಸದಲ್ಲಿ ಸೇರುತ್ತವೆ. ಆದರೆ, ಪ್ರತಿವರ್ಷದ ಕಾರ್ಯಕ್ರಮವು, ಸಾಮಾನ್ಯ ಸಭೆಯಲ್ಲಿ ಹಾಜರಿದ್ದ ಸಭಾಸದರ ಪೈಕಿ ಮೂರು-ಐದಾಂಶದಷ್ಟು ಸಭಾಸದರ ಬಹು ಮತದಿಂದ ನಿಶ್ಚಯಿಸಲ್ಪಡುತ್ತದೆ ಮತ್ತು ಈ ಕಾರ್ಯಕ್ರಮದಂತೆ ನಡೆಯಲಿಕ್ಕೆ ಯಾವತ್ತು ಸಭಾಸದರು ಬದ್ಧರಿರುತ್ತಾರೆ, ಮತ್ತು ಹೀಗೆ ಮಾಡಲಿಕ್ಕೆ ತಪ್ಪಿದರೆ ದಂಡದ ಶಿಕ್ಷೆಯಾಗುತ್ತದೆ. ಈ ಮೇರೆಗೆ, ಇಂಥ ಸಂಘಗಳ ಕಾರ್ಯಕ್ರಮಕ್ಕೆ ಸಭಾಸದರ ಬಹುಮತದವರು ಅನುಮತಿ ಕೊಡಬೇಕಾಗಿರುವದರಿಂದ, ತಪ್ಪು ರೀತಿಯಿಂದ ಕಾರ್ಯಾರಂಭ ಮಾಡುವದು ಶಕ್ಯವಿರುವದಿಲ್ಲ. ಇಂಥ ಸಂಘಗಳು, ಧಾರ್ಮಿಕ ಸಮಾರಂಭಗಳ ಹಾಗೂ ವ್ಯಾಜ್ಯಗಳ ಬಗ್ಗೆ ವ್ಯರ್ಥವಾಗಿ ವೆಚ್ಚವಾಗುವ ಹಣವನ್ನು ಕಡಿಮೆ ಮಾಡಿರುತ್ತವೆ, ಯಾಕೆಂದರೆ, ವ್ಯಾಜ್ಯಗಳನ್ನು ಸದರಿ ಸಂಘದ ಒಂದು ಕವಿಂಟಿಯವರು ಸಂಕ್ಷಿಪ್ತ ರೀತಿಯಿಂದ ತೀರ್ಮಾನಿಸುತ್ತಾರೆ. ಆದರೆ, ಇಂಥ ಸಂಘಗಳ ಬಗ್ಗೆ ನಿಜವಾದ ಬೇಡುವಿಕೆಯಿಲ್ಲದಿದ್ದರೆ ಮತ್ತು ಒಳ್ಳೇ ಕೆಲಸ ಗಾರರು ದೊರೆಯದಿದ್ದರೆ, ಇಂಥ ಸಂಘಗಳನ್ನು ಸ್ಥಾಪಿಸಬಾರದು.

೮. ಈ ಖಾತೆಯ ಉದ್ದೇಶವು, ಕೆಲಸಗಳನ್ನು ಮಾಡಿಸಿಕೊಳ್ಳುವದಿಷ್ಟೇ ಇರದೆ, ಸ್ಥಾನಿಕ ಕೆಲಸಗಾರರು ಈ ಖಾತೆಯ ಅಮಲದಾರರ ಆಲೋಚನೆ ಪಡೆದು ತಾವಾಗಿ ಕಾರ್ಯಪ್ರವೃತ್ತರಾಗುವಂತೆ ಅವರನ್ನು ಹುರಿದುಂಬಿಸುವದಾಗಿದೆ.